# ಎಮ್ ಚಾಟ್

**ನಿಮ್ಮ ಮಗು ಸಾಮಾನ್ಯವಾಗಿ ಇರುವ ರೀತಿಗೆ ಅನುಗುಣವಾಗಿ ಈ ಮುಂದಿನ ಪ್ರತೀ ಪ್ರಶ್ನೆಯನ್ನು ದಯವಿಟ್ಟು ಉತ್ತರಿಸಿ. ಅವನ ಯಾವುದೇ ವರ್ತನೆ ಅಪರೂಪವಿದ್ದಲ್ಲಿ (ಉದಾ : ಕೇವಲ ಒಂದೆರೆಡು ಬಾರಿ ನೀವು ನೋಡಿದ್ದಲ್ಲಿ) ದಯವಿಟ್ಟು ಅದನ್ನು ನಿಮ್ಮ ಮಗು ಮಾಡುವುದಿಲ್ಲ ಎಂದು ಉತ್ತರಿಸಿ.**

1. ನಿಮ್ಮ ಮಗುವನ್ನು ನಿಮ್ಮ ಮಂಡಿಯ ಮೇಲೆ ಕುಳ್ಳರಿಸಿಕೊಂಡು ತೂಗಿಸಿದಾಗ, ಮೇಲೆ ಪುಟಿಯುವಂತೆ ಮಾಡಿದಾಗ ಆನಂದ ಪಡುವುದೆ?

   ಹೌದು – ಇಲ್ಲ

2. ನಿಮ್ಮ ಮಗು ಬೇರೆ ಮಕ್ಕಳ ಬಗ್ಗೆ ಆಸಕ್ತಿ ತೋರುವುದೆ ?

   ಹೌದು – ಇಲ್ಲ

3. ನಿಮ್ಮ ಮಗು ಮಹಡಿ ಹತ್ತಲು ಇಷ್ಟಪಡುವುದೆ ?

   ಹೌದು – ಇಲ್ಲ

4. ನಿಮ್ಮ ಮಗು ಕಣ್ಣು ಮುಚ್ಚಾಲೆ ಹಾಗೂ ಬಚ್ಚಿಟ್ಟುಕೊಳ್ಳುವುದು – ಹುಡುಕುವುದು ಈ ರೀತಿಯ ಆಟಗಳಲ್ಲಿ ಆನಂದ ಪಡುವುದೆ ?

   ಹೌದು – ಇಲ್ಲ

5. ನಿಮ್ಮ ಮಗು ಎಂದಾದರೂ ದೂರವಾಣಿಯಲ್ಲಿ ಮಾತನಾಡುವಂತೆ ಅಥವಾ ಬೊಂಬೆಗಳನ್ನು ಉಪಚರಿಸುವಂತೆ ಅಥವಾ ಯಾವುದೇ ಇನ್ನಿತರೆ ಕೆಲಸಗಳಲ್ಲಿ ತೊಡಗಿರುವಂತೆ ನಟಿಸುವುದೇ ?

   ಹೌದು – ಇಲ್ಲ

6. ನಿಮ್ಮ ಮಗು ಎಂದಾದರೂ ತನ್ನ ತೋರು ಬೆರಳಿನಿಂದ ಏನನ್ನಾದರೂ ಕೇಳಲು, ತೋರಿಸಲು ಬೊಟ್ಟು ಮಾಡುವುದೆ ?

   ಹೌದು – ಇಲ್ಲ

7. ನಿಮ್ಮ ಮಗು ಎಂದಾದರೂ ತನ್ನ ಆಸಕ್ತಿಯನ್ನು ವ್ಯಕ್ತಪಡಿಸಲು ಅವನ/ಅವಳ ತೋರು ಬೆರಳಿನಿಂದ ಬೊಟ್ಟು ಮಾಡಿ ತೋರುಸುವುದೆ ?

   ಹೌದು – ಇಲ್ಲ

8. ನಿಮ್ಮ ಮಗು ತನ್ನ ಸಣ್ಣ ಪುಟ್ಟ ಆಟಿಕೆಗಳಾದ ಕಾರು ಇತ್ಯಾದಿಗಳೊಂದಿಗೆ ಎಂದಾದರೂ ಬಾಯಿಯೊಳಗೆ ಇಡದೆ, ಎಸೆಯದೆ ಸರಿಯಾದ ರೀತಿಯಲ್ಲಿ ಆಡುವನೆ ?

   ಹೌದು – ಇಲ್ಲ

9. ನಿಮ್ಮ ಮಗು ಎಂದಾದರೂ ತನ್ನ ಆಟಿಕೆಗಳನ್ನಾಗಲೀ ಇತರೆ ವಸ್ತುಗಳನ್ನಾಗಲೀ ಆಸಕ್ತಿಯಿಂದ ನಿಮಗೆ ತಂದು ತೋರಿಸುವುದೆ ?

   ಹೌದು – ಇಲ್ಲ

10. ನಿಮ್ಮ ಮಗು ನಿಮ್ಮನ್ನು ಕೆಲವು ಕ್ಷಣಗಳ ಕಾಲ ಕಣ್ಣಲ್ಲಿ ಕಣ್ಣಿಟ್ಟು ದೃಷ್ಟಿಸಿ ನೋಡುವುದೆ ?

   ಹೌದು – ಇಲ್ಲ

11. ನಿಮ್ಮ ಮಗು ಯಾವುದೇ ಶಬ್ದಕ್ಕೆ ಬಹಳ ಸೂಕ್ಷ್ಮತೆಯಿಂದ ಪ್ರತಿಕ್ರಿಯಿಸಿ ಕಿವಿಗಳನ್ನು ಮುಚ್ಚಿಕೊಳ್ಳುವುದೆ ?

   ಹೌದು – ಇಲ್ಲ

12. ನಿಮ್ಮ ಮಗು ನಿಮ್ಮ ಮುಖ ಅಥವಾ ನಿಮ್ಮ ನಗುವಿಗೆ ಬದಲಾಗಿ ನಗುವುದರೊಂದಿಗೆ ಪ್ರತಿಕ್ರಿಯೆ ನೀಡುವುದೆ ?

ಹೌದು – ಇಲ್ಲ

13. ನಿಮ್ಮ ಮಗು ನಿಮ್ಮನ್ನು ಅನುಕರಣೆ ಮಾಡುವುದೆ ? (ಉದಾ : ನೀವು ಮಾಡಿದ ಹಾಗೇ ತಾನೂ ಮುಖ ಮಾಡುವುದು)

ಹೌದು – ಇಲ್ಲ

14. ನಿಮ್ಮ ಮಗು ಅವನ / ಅವಳ ಹೆಸರಿಟ್ಟು ಕರೆದಾಗ ಪ್ರತಿಕ್ರಿಯೆ ನೀಡುವುದೆ?

ಹೌದು – ಇಲ್ಲ

15. ಕೋಣೆಯಿಂದಾಚೆ ಇರುವ ಆಟಿಕೆಯನ್ನು ನೀವು ಬೊಟ್ಟು ಮಾಡಿ ತೋರಿಸಿದಲ್ಲಿ ನಿಮ್ಮ ಮಗು ಅದನ್ನು ನೋಡುವುದೆ ? ಹೌದು – ಇಲ್ಲ

16. ನಿಮ್ಮ ಮಗು ನಡೆಯ ಬಲ್ಲದೆ ? ಹೌದು – ಇಲ್ಲ

17. ನಿಮ್ಮ ಮಗು ನೀವು ನೋಡುತ್ತಿರುವ ವಸ್ತುಗಳ ಕಡೆ ತಿರುಗಿ ತಾನೂ ಅದನ್ನೇ ನೋಡುವುದೆ?

ಹೌದು – ಇಲ್ಲ

18. ನಿಮ್ಮ ಮಗು ತನ್ನ ಮುಖದ ಹತ್ತಿರ ತನ್ನ ಬೆರಳುಗಳನ್ನು ವಿಚಿತ್ರವಾಗಿ ಆಡಿಸುತ್ತದೆಯೇ?

ಹೌದು – ಇಲ್ಲ

19. ನಿಮ್ಮ ಮಗು ತನ್ನ ಕೆಲಸಗಳಿಂದ ನಿಮ್ಮ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳಲು ಪ್ರಯತ್ನ ಪಡುವುದೆ ?

ಹೌದು – ಇಲ್ಲ

20. ನಿಮ್ಮ ಮಗು ಕಿವುಡನೇ ಎಂಬ ಸಂಶಯ ಎಂದಾದರೂ ನಿಮಗೆ ಬಂದಿರುವುದೆ?

ಹೌದು – ಇಲ್ಲ

21. ನಿಮ್ಮ ಮಗು ಜನರು ಏನು ಹೇಳುತ್ತಿದ್ದಾರೆಂದು ಅರ್ಥ ಮಾಡಿಕೊಳ್ಳುವುದೆ?

ಹೌದು – ಇಲ್ಲ

22. ನಿಮ್ಮ ಮಗು ಕೆಲವೊಮ್ಮೆ ಎಲ್ಲೋ ದುರುಗುಟ್ಟಿ ನೋಡುವುದು ಅಥವಾ ಅನಾವಶ್ಯಕವಾಗಿ ಅತ್ತಿಂದಿತ್ತ ಸುತ್ತಾಡುವುದೆ?

ಹೌದು – ಇಲ್ಲ

23. ನಿಮ್ಮ ಮಗು ಅಪರಿಚಿತರನ್ನು ಅಥವಾ ಹೊಸ ವಸ್ತುಗಳನ್ನು ಕಂಡಾಗ ನಿಮ್ಮ ಪ್ರತಿಕ್ರಿಯೆಗಾಗಿ ನಿಮ್ಮನ್ನು ನೋಡುವುದೆ?

ಹೌದು – ಇಲ್ಲ

© 1999 Robins, Fein, Barton.
Translators : Dr. Chitra Sankar, Dr. Neelkamal Soares, Dr. Harohalli Sashidhar

# <u>ಎಮ್ ಚಾಟ್ ಪರೀಕ್ಷಣಾ ಕ್ರಮ</u>

ಮಗು ಕೆಳಗಿನ 23 ಪ್ರಶ್ನಾವಳಿಯಲ್ಲಿ ಕೊಟ್ಟಿರುವ ಏಳು (ಆಪತ್ತಿನ) ಸೂಕ್ಷ್ಮವಾದ ಪ್ರಶ್ನೆಗಳಲ್ಲಿ ಎರಡಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಅಥವಾ ಯಾವುದೇ ಇತರ ಮೂರು ಪ್ರಶ್ನೆಗಳಿಗೆ (ಸ್ಪಂದಿಸದಿದ್ದಲ್ಲಿ) ಅನುತ್ತೀರ್ಣನಾದಲ್ಲಿ, ಈ ಪ್ರಶ್ನಾವಳಿಯಲ್ಲಿ ಅನುತ್ತೀರ್ಣನಾದಂತೆ ಪರಿಗಣಿಸಲಾಗುವುದು. ಹೌದು/ಇಲ್ಲ ಉತ್ತರಗಳನ್ನು ಉತ್ತೀರ್ಣ / ಅನುತ್ತೀರ್ಣ ಎಂದು ಪರಿವರ್ತಿಸಿಕೊಳ್ಳಬೇಕು. ಈ ಕೆಳಗೆ ಪ್ರತಿ ಪ್ರಶ್ನೆಗೆ ಅನುತ್ತೀರ್ಣವಾಗಲು ಬೇಕಾದ ಪ್ರತ್ಯುತ್ತರಗಳನ್ನು ಪಟ್ಟಿಮಾಡಲಾಗಿದೆ. ಸ್ಫುಟವಾದ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಲಾಗಿರುವ ಪ್ರತ್ಯುತ್ತರಗಳನ್ನು ಆಪತ್ತಿನ / ಸೂಕ್ಷ್ಮ ಪ್ರಶ್ನೆಗಳೆಂದು ಪರಿಗಣಿಸಬೇಕು.

ಈ ಪ್ರಶ್ನಾವಳಿಯಲ್ಲಿ ಅನುತ್ತೀರ್ಣಗೊಂಡ ಎಲ್ಲಾ ಮಕ್ಕಳೂ ಆಟಿಸಂ ಗುಂಪಿನ ಅಳತೆಗೋಲಿಗೆ ಸ್ಪಂದಿಸಿದ್ದಾರೆಂದು ಪರಿಗಣಿಸಲಾಗದು. ಆದರೂ ಅಂತಹ ಮಕ್ಕಳನ್ನು ವೈದ್ಯರುಗಳ ಬಳಿ ಅಥವಾ ಬೆಳವಣಿಗೆ-ವಿಕಾಸ ತಜ್ಞರ ಬಳಿ ಆಳವಾದ ವಿಚಾರಣೆಗೆ ಕಳುಹಿಸಬೇಕು,

| | | | | |
|---|---|---|---|---|
| 1 ಇಲ್ಲ | 6 ಇಲ್ಲ | 11 ಹೌದು | 16 ಇಲ್ಲ | 21 ಇಲ್ಲ |
| **2 ಇಲ್ಲ** | **7 ಇಲ್ಲ** | 12 ಇಲ್ಲ | 17 ಇಲ್ಲ | 22 ಹೌದು |
| 3 ಇಲ್ಲ | 8 ಇಲ್ಲ | **13 ಇಲ್ಲ** | 18 ಹೌದು | 23 ಇಲ್ಲ |
| 4 ಇಲ್ಲ | **9 ಇಲ್ಲ** | **14 ಇಲ್ಲ** | 19 ಇಲ್ಲ | |
| 5 ಇಲ್ಲ | 10 ಇಲ್ಲ | **15 ಇಲ್ಲ** | 20 ಹೌದು | |